# ವಚನ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು

**ಕುಮಾರ ಹೆಚ್.ಸಿ.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎನ್.ಐ.ಇ. ಪ್ರಥಮ ದರ್ಜೆ ಕಾಲೇಜು, ವಿಶ್ವೇಶ್ವರ ನಗರ, ಮೈಸೂರು.

DOI: https://doi.org/10.5281/zenodo.15490817

## ABSTRACT:

ವಚನ ಸಾಹಿತ್ಯವು ಕನ್ನಡ ಸಾಹಿತ್ಯದ ವಿಶಿಷ್ಟ ಮಾದರಿಯ ಸಾಹಿತ್ಯ ಪ್ರಕಾರವಾಗಿದ್ದು, ಕಾಯಕಕ್ಕೆ, ಮಾನವೀಯ ಸಂಬಂಧಗಳಿಗೆ ಹಾಗೂ ಸೃಜನಶೀಲತೆಗೆ ಪ್ರಮುಖ ಸ್ಥಾನವನ್ನು ನೀಡಿ ಗೌರವಿಸಿದೆ. ಶಿವಶರಣರು ತಮ್ಮ ದಿನನಿತ್ಯದ ನಡೆನುಡಿಗಳನ್ನೇ ವಚನಗಳೆಂಬ ಹಾಡುಗಬ್ಬವಾಗಿ ರಚಿಸಿದರು. ಬಸವಣ್ಣ, ಅಕ್ಕ, ಅಲ್ಲಮ ದಾಸಿಮಯ್ಯ, ಸಿದ್ದರಾಮರಂಥಹ ಅನೇಕ ವಚನಕಾರರರು ಕಾಯಕಕ್ಕೆ ಮಹತ್ವ ಕೊಟ್ಟು ಜನರಲ್ಲಿದ್ದ ಕೆಟ್ಟ ಆಲೋಚನೆಗಳನ್ನು ದೂರ ಮಾಡಿ ಹೊಸ ವಿಶ್ವಾಸದ ಹಾದಿಯನ್ನು ತೋರಿಸಿದರು.

ಲಿಂಗ ತಾರತಮ್ಯ, ವರ್ಗ ಸಂಘರ್ಷ, ಜಾತಿ ಪದ್ಧತಿ ಅಸಮಾನತೆ ಮುಂತಾದ ವ್ಯವಸ್ಥೆಗಳ ವಿರುದ್ಧ ಹೋರಾಡಿ ಸಭ್ಯ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಿ, ಸಮಾಜದಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತಿ ಬೆಳೆದರು. ನಡೆ ನುಡಿ ಶುದ್ಧವಾಗಿರಬೇಕು. ಮನುಷ್ಯನಿಗೆ, ಗಾಳಿ, ನೀರು, ಊಟ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ತತ್ವಗಳು ಆದರ್ಶಗಳು, ಮೌಲ್ಯಗಳು ಎಂದು ತಿಳಿಸಿಕೊಟ್ಟರು. ಕೆಟ್ಟ ಸಮಾಜದ ನಾಶಕ್ಕಾಗಿ ಹಗಲಿರುಳು, ಪ್ರೀತಿಸುವ ಕಾಯಕ ಮಾಡುವ ಸಮಾಜವನ್ನು ನಿರೀಕ್ಷಿಸದೆ ವಚನಕಾರರು, ಅದನ್ನು ಜಾರಿಗೊಳಿಸುವಲ್ಲಿ ಸಫಲರಾದರು.

12ನೇ ಶತಮಾನದಲ್ಲಿ ಬಂದಂಥಹ ಈ ವಚನ ಸಾಹಿತ್ಯವು ಸಮಾಜದ ದಿಕ್ಕುದಿಸೆಯನ್ನೇ ಬದಲಾಯಿಸಿ ಒಂದು ಸಾಮಾಜಿಕ ಕ್ರಾಂತಿಯನ್ನೇ ಮಾಡಿ ಎಂದೂ ಅಳಿಯದ ಅಚ್ಚನ್ನು ಒತ್ತಿದೆ. ಈ ವಚನ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು, ಜೀವನ ಮೌಲ್ಯಗಳು ತುಂಬಾ ಇವೆ ಎಂದು ಹೇಳಬಹುದು.

## KEYWORDS:

ಧರ್ಮಸಂಘರ್ಷ, ಸದೃಢ ಸಮಾಜ, ಉತ್ತಮ ಸಮಾಜ ನಿರ್ಮಾಣ, ಕಾಯಕ ಜೀವಿಗಳು, ಸಮಾನತೆಯ ತತ್ತ್ವ , ಲಿಂಗ ಸಮಾನತೆ.

**ಪೀಠಿಕೆ:**

ಹನ್ನೆರಡನೇ ಶತಮಾನದಲ್ಲಿ ಕಂಡುಬಂದಂತಹ ವಚನಕಾರರು ಸಾಮರಸ್ಯ ಮತ್ತು ಸಮಾನತೆಯ ತತ್ವಗಳನ್ನು ಆದರ್ಶಗಳಾಗಿ ನಂಬಿದ್ದರು. ಲೌಕಿಕ–ಅಲೌಕಿಕ, ಸಂಸಾರ–ಸನ್ಯಾಸಿ ಇವುಗಳಿಗೆ ಸಾಮರಸ್ಯವನ್ನು ಬೆರೆಸಿ ಪ್ರಸ್ತುತ ಜೀವನಕ್ಕೆ ಅರ್ಥವನ್ನು ತುಂಬಿದರು. ಲಿಂಗ–ಜಾತಿ, ಕುಲ, ವೃತ್ತಿ ವರ್ಗಗಳು, ಮೂಢನಂಬಿಕೆಗಳಂತಹ ಸಾಂಪ್ರದಾಯಿಕ ಜಿಡ್ಡುಗಟ್ಟಿದ ನೀತಿಗಳನ್ನು ಶಿವರಶಣರು ತಿರಸ್ಕರಿಸಿ ಹೊಸ ಸಾಹಿತ್ಯಕ್ಕೆ, ಸಮಾಜಕ್ಕೆ ನಾಂದಿ ಹಾಡಿದರು. ಮನುಷ್ಯನಿಗೆ ಮೌಲ್ಯಗಳೇ ಪ್ರಮುಖ ಎಂಬ ಪ್ರೀತಿ ವಿಶ್ವಾಸದ ಸೂತ್ರದಲ್ಲಿ ವೈಚಾರಿಕ ನೆಲೆಯಲ್ಲಿ ಚಿಂತನೆಗಳನ್ನು ಮಾಡಿದವರು.

ವ್ಯಕ್ತಿತ್ವ ವಿಕಸನ, ಸಾಮಾಜಿಕ ಸೃಜನಶೀಲತೆ ಮತ್ತು ಸಾಂಸ್ಕೃತಿಕ ಚಲನಶೀಲತೆಯನ್ನು ನಿರ್ಬಂಧ ಮಾಡಿದ್ದ ಸಮಾಜದ ವಿರುದ್ಧ ಹೋರಾಡಿ, ನೈತಿಕತೆ, ಆಧ್ಯಾತ್ಮಿಕ ಜಾಗೃತಿ, ಜೀವನ ಮೌಲ್ಯ ಇವುಗಳನ್ನು ಪ್ರತಿಪಾದಿಸಿದರು. ಆತ್ಮ ಪರಿಶೋಧನೆಗೆ ಅಡ್ಡಗೋಡೆಗಳಾಗಿದ್ದ ಅವೈಜ್ಞಾನಿಕ ಗ್ರಹಿಕೆಗಳನ್ನು ಪರೀಕ್ಷಿಸಿ ಬದುಕಿನ ದಾರಿ ತೋರಿಸಿದವರು ಶಿವಶರಣರು. ಜಿಡ್ಡುಗಟ್ಟಿದ ಅಸಂಪ್ರದಾಯಿಕ ಗ್ರಹಿಕೆಗಳಿಗೆ ವೈಚಾರಿಕ ತಿರುವನ್ನು ನೀಡಿ ಆಧ್ಯಾತ್ಮದ ಮೌಲ್ಯವನ್ನು ತುಂಬಿದ್ದು ಶರಣ ಚಳುವಳಿಯ ಮಹತ್ವದ ಸಾಧನೆ.

ವಚನ ಸಾಹಿತ್ಯವು ಕನ್ನಡದಲ್ಲಿ ವಿಶಿಷ್ಟ ಮಾದರಿಯ ಸಾಹಿತ್ಯ ಪ್ರಕಾರವಾಗಿದ್ದು, ಬೇರೆ ಯಾವುದೇ ಭಾಷೆಯನ್ನು ಅನುಕರಿಸದೇ ಅಥವಾ ಆದರ್ಶವಾಗಿ ಇಟ್ಟುಕೊಳ್ಳದೆ ಕೇವಲ ಅನುಭವದಿಂದಲೇ ಮೂಡಿ ಬಂದಿರುವ ವಚನ ಸಾಹಿತ್ಯವು ಕನ್ನಡ ಭಾಷೆಯ ಹೆಮ್ಮೆಯ ಪ್ರಕಾರವಾಗಿದೆ.

**ಉದ್ದೇಶ ಮತ್ತು ವ್ಯಾಪ್ತಿ:**

ಪಂಪ, ರನ್ನ, ಪೊನ್ನರ ವಿದ್ವತ್ಪೂರ್ಣ ಸಾಹಿತ್ಯವನ್ನು ಕಾವ್ಯಗಳನ್ನು ಓದಿ ಅರ್ಥೈಸಿಕೊಳ್ಳಲು ಸಾಧ್ಯವಾಗದಂತಹ ಸಂದರ್ಭದಲ್ಲಿ ಆನಂತರ ಬಂದಂತಹ ಸರಳವಾದ ಭಾಷೆಯ, ಜನರಿಗೆ ತೀರ ಹತ್ತಿರವಾದಂತಹ, ಮನಸ್ಸಿಗೆ ಮುಟ್ಟಿದಂತಹ ಸಾಹಿತ್ಯ ಪ್ರಕಾರವೆ ವಚನ ಸಾಹಿತ್ಯ. ನೂರಾರು ವಚನಕಾರರು ಯಾವುದಾದರೊಂದು ಕಾಯಕವನ್ನು ಮಾಡಿಕೊಂಡು ತಮ್ಮ ತಮ್ಮ ಆದರ್ಶಗಳನ್ನು ಇಟ್ಟುಕೊಂಡು ಸಮಾಜದಲ್ಲಿನ ಅಂಕುಡೊಂಕುಗಳನ್ನು, ಆಡಂಬರಗಳನ್ನು, ಢಾಂಬಿಕ ಭಕ್ತಿಯನ್ನು ಮೂಢನಂಬಿಕೆಗಳನ್ನು ಪ್ರಶ್ನಿಸುವ ಮೂಲಕ ಅದಕ್ಕೆ ಪರಿಹಾರಗಳನ್ನು ಕೂಡ ಸೂಚಿಸಿ ಸಮಾಜವನ್ನು ಸರಿದಾರಿಗೆ ತರುವ ಪ್ರಯತ್ನವನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ಬಂದಂತಹ ಹಲವಾರು ವಚನಕಾರರ ವಚನಗಳಲ್ಲಿ ಜೀವನ ಮೌಲ್ಯಗಳು ಹೇರಳವಾಗಿ ಇರುವುದನ್ನು ಕಾಣಬಹುದು.

ಪ್ರಸ್ತುತ ಸಮಾಜವು ಅಂಧಕಾರವೆಂಬ ಕೂಪದಲ್ಲಿ ಬಿದ್ದು ನರಳಿ ಒದ್ದಾಡುತ್ತಿದೆ. ಎಲ್ಲಿ ನೋಡಿದರು ಕೊಲೆ, ಅಕ್ರಮ, ಅತ್ಯಾಚಾರ, ದರೋಡೆ, ಅನ್ಯಾಯ, ಅಹಿಂಸೆಗಳೇ ತಾಂಡವವಾಡುತ್ತಿವೆ. ಇಂಥ ವಿಷಕಾರಿ ಸಮಾಜದಲ್ಲಿ ಮೂಢನಂಬಿಕೆಗಳು, ಜಾತಿವೈಷಮ್ಯ, ಧರ್ಮ ಸಂಘಷಗಳು ಮಿತಿ ಮೀರಿ ನರ್ತಿಸುತ್ತಿವೆ. ಮಾನವ ಬದುಕುವುದಕ್ಕೂ ಪರದಾಡುತ್ತಿರುವ ಪ್ರಸ್ತುತ ಸಮಾಜವನ್ನು ಸರಿದಾರಿಗೆ ತರುವುದಕ್ಕೆ ವಚನ ಸಾಹಿತ್ಯದಲ್ಲಿ ಉತ್ತರವಿದೆ. ಸರಳವಾಗಿ, ಕಾಯಕಜೀವಿಗಳಾಗಿ, ನ್ಯಾಯಯುತವಾಗಿ ಬದುಕಿ ಬದುಕನ್ನು ಹೇಗೆ ಹಸನು ಮಾಡಿಕೊಳ್ಳಬೇಕೆಂಬುದರ ತಿಳಿವು ವಚನ ಸಾಹಿತ್ಯದಲ್ಲಿದೆ. ಸದೃಢ ಸಮಾಜಕ್ಕೆ ಕೈ ಜೋಡಿಸಬೇಕು, ಉತ್ತಮ ಸಾಮಾಜಿಕ ವಾತಾವರಣವನ್ನು ನಿರ್ಮಿಸಲು ವಚನಕಾರರು ನಮಗೆ ಮಾದರಿಗಳಾಗಿ ನಿಲ್ಲುತ್ತಾರೆ. ಆದ್ದರಿಂದಲೆ ಅಂಧಕಾರದಿಂದ ಕೂಡಿದ ಈ ಸಮಾಜವನ್ನು ಬೆಳಕಿನೆಡೆಗೆ ಕೊಂಡೊಯ್ಯಲು ವಚನಕಾರರ ಆಶಯಗಳೇ ಮುಖ್ಯವಾಗಿವೆ ಎಂಬ ಉದ್ದೇಶದಿಂದ ವಚನ ಸಾಹಿತ್ಯದಲ್ಲಿನ ಜೀವನ ಮೌಲ್ಯಗಳನ್ನು ಇಲ್ಲಿ ಹೇಳಲು ಬಯಸುತ್ತೇನೆ.

**ವ್ಯಾಪ್ತಿ:**

ಹನ್ನೆರಡನೆಯ ಶತಮಾನದಲ್ಲಿ ನೂರಾರು ಶಿವಶರಣರು ಬಾಳಿ ಬದುಕಿ ಮೌಲ್ಯಗಳನ್ನು ಕಲಿಸಿ ಹೋದರು. ಅವರಲ್ಲಿ ಬಸವಣ್ಣ, ಅಲ್ಲಮಪ್ರಭು, ಜೇಡರ ದಾಸಿಮಯ್ಯ, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ಸೊನ್ನಲಿಗೆ ಸಿದ್ದರಾಮ, ಸಕಲೇಶ ಮಾದರಸ, ಆಯ್ದಕ್ಕಿ ಮಾರಯ್ಯ ಮತ್ತು ಅವನ ಪತ್ನಿ ಆಯ್ದಕ್ಕಿ ಲಕ್ಕಮ್ಮ, ಸಂಕವ್ವೆ, ಮಾದಾರ ಚೆನ್ನಯ್ಯ, ಚೆನ್ನಬಸವಣ್ಣ ಮುಂತಾದವರು. ಇವರ ವಚನಗಳಲ್ಲಿ ಕಂಡುಬರುವ ಜೀವನ ಮೌಲ್ಯಗಳನ್ನು ತಿಳಿಸುವ ಮತ್ತು ಅದನ್ನು ವಾಸ್ತವಿಕ ನೆಲೆಯಲ್ಲಿ ಅರ್ಥೈಸುವ ಒಂದು ಸಣ್ಣ ಪ್ರಯತ್ನ ಈ ಲೇಖನದಲ್ಲಿದೆ.

**ವಿಷಯ ನಿರೂಪಣೆ:**

12ನೇ ಶತಮಾನದ ವಿಶ್ವದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದ್ದು. ಕರ್ನಾಟಕದಲ್ಲಿ ಬಸವಾದಿ ಶರಣರ ದಿವ್ಯ ಮಾರ್ಗದರ್ಶನದಲ್ಲಿ ಮಾನವ ಕಲ್ಯಾಣ ದಿಸೆಯಲ್ಲಿ ನಡೆದ ಸಮರ, ಕ್ರಾಂತಿ ವಿಶ್ವದ ಯಾವುದೇ ಭಾಗದಲ್ಲಿ ಒಮ್ಮೆಲೆ ನಡೆದ ನಿದರ್ಶನಗಳೇ ಇಲ್ಲ. ವಿಶ್ವದಲ್ಲಿ ಕಾಲಕಾಲಕ್ಕೆ ಅನೇಕ ರೀತಿಯ ಕ್ರಾಂತಿಗಳಾಗಿವೆ. ಆ ಯಾವ ಕ್ರಾಂತಿಗೂ ಈ ಶರಣರು ಮಾಡಿದಂತಹ ಸಮಗ್ರ ಕ್ರಾಂತಿಯನ್ನು ಹೋಲಲು ಸಾಧ್ಯವಿಲ್ಲ. ಸಮಾಜದ ಎಲ್ಲ ಸ್ತರದ ವ್ಯಕ್ತಿಗಳು ಇದರಲ್ಲಿ ಭಾಗವಹಿಸಿದ್ದರು. ಬಸವಣ್ಣನವರ ಒಂದು ವಚನ ಹೀಗಿದೆ.

**ಕಳಬೇಡ, ಕೊಲಬೇಡ**
**ಹುಸಿಯ ನುಡಿಯಲು ಬೇಡ**

**ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ**
**ತನ್ನ ಬಣ್ಣಿಸಬೇಡ, ಇದಿರ ಅಳಿಯಲು ಬೇಡ**
**ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ**
**ಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ**

ಈ ವಚನ ವಿಶ್ವಕ್ಕೆ ನೀಡಿದ ಒಂದು ದಿವ್ಯ ಸಂದೇಶ ಹಾಗೂ ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಲೇಬೇಕಾದ ಜೀವನ ಮೌಲ್ಯಗಳು ಇದರಲ್ಲಿ ಅಡಗಿವೆ. ಕಳ್ಳತನ, ಕೊಲೆ, ಸುಳ್ಳು, ಕೋಪತಾಪಗಳೇ ತುಂಬಿ ತುಳುಕುತ್ತಿರುವ ಪ್ರಸ್ತುತ ಸಮಾಜದ ಜನರು ಸಪ್ತಸೂತ್ರಗಳನ್ನೊಳಗೊಂಡ ಈ ವಚನದ ಸಾಲುಗಳನ್ನು ಅವಳಡಿಸಿಕೊಂಡರೆ ಎಲ್ಲಾ ಸಮಸ್ಯೆಗೂ ಪರಿಹಾರ ಸಿಗುತ್ತದೆ. ‘‘ಮನವರಿಯದ ಕಳ್ಳತನವಿಲ್ಲವಲ್ಲ’’ ಎಂಬ ಮಾತಿನಂತೆ ಅಂತರಂಗ ಬಹಿರಂಗ ಇವೆರಡು ಶುದ್ಧವಾಗಿರಬೇಕೆಂಬ ಸಾರ್ವಕಾಲಿಕ ಮೌಲ್ಯ ಈ ವಚನದಲ್ಲಿ ಅಡಗಿದೆ. ಈ ವಚನಗಳು ಯಾರನ್ನೊ ಮೆಚ್ಚಿಸಲಿಕ್ಕೆ, ಇಲ್ಲ ಕಾವ್ಯ ಚಮತ್ಕಾರಗಳನ್ನು ಪ್ರದರ್ಶಿಸಲು ಬರೆದದ್ದಲ್ಲ. ಬದಲಾಗಿ ಅನುಭವದ ಆನುಭಾವಿಕ ನುಡಿಗಳಾಗಿವೆ. ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ಆದರ್ಶಗಳನ್ನು ಸಮಾಜಕ್ಕೆ ಅನ್ವಯಿಸುವುದು ವಚನಕಾರರ ಆಶಯವಾಗಿದೆ. ದೇವರನ್ನು ಒಲಿಸಿಕೊಳ್ಳಲು ನೀನು ಪೂಜೆ, ವ್ರತ ಮಾಡುವ ಅವಶ್ಯಕತೆ ಇಲ್ಲ.‘‘ನಡೆನುಡಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ’’ ಎನ್ನುವಂತೆ, ನಡೆನುಡಿಗಳಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಳ್ಳಬೇಕೆಂಬ ಜೀವನ ಮೌಲ್ಯವನ್ನು ಬಸವಣ್ಣನವರ ಈ ವಚನ ಹೇಳುತ್ತದೆ. ಬಸವಣ್ಣನವರ ಮತ್ತೊಂದು ವಚನ ಹೀಗಿದೆ:

**ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ**
**ಲಿಂಗದ ಮೇಲೆ ನಿಷ್ಠೆ ಇಲ್ಲದ ಭಕ್ತ**
**ಇದ್ದರೇನು ಶಿವ ಶಿವ, ಹೋದರೇನು ಶಿವ ಶಿವ**
**ಕೂಡಲ ಸಂಗಮ ದೇವಯ್ಯ**
**ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ**

ಗಂಡ ಹೆಂಡತಿ ಸಂಬಂಧ ಪವಿತ್ರವಾದದ್ದು, ಶಾಶ್ವತವಾದದ್ದು, ಹೊಂದಾಣಿಕೆಯಿಂದ ಸಾಮರಸ್ಯದಿಂದ ಕೂಡಿ ಬಾಳಬೇಕಾಗಿರುವಂಥದ್ದು. ಆದರೆ ಅಂತಹ ದಾಂಪತ್ಯದಲ್ಲಿ ಸಾಮರಸ್ಯ ಇರದಿರುವುದನ್ನು ನೋಡಿದ ಬಸವಣ್ಣನ ಮನಸ್ಸು ಅವರ ಸ್ಥಿತಿಗೆ ಮರುಗುತ್ತದೆ, ಕನಿಕರಿಸುತ್ತದೆ. ಅವರನ್ನು ಸರಿದಾರಿಗೆ ತರುವ ಹಂಬಲ ಎದ್ದು ಕಾಣುತ್ತದೆ. ಗಂಡನ ಮೇಲೆ ನಿಷ್ಠೆ ಇಲ್ಲದ ಭಕ್ತಿ ವ್ಯರ್ಥವೆನ್ನುತ್ತಾರೆ. ಇವು ಇಲ್ಲದ ಸಂಬಂಧ ‘ಹಾಲು ಕೊಡದ ಹಸುವಿಗೆ ಹಾಲು ಕುಡಿಯದ ಕರುವನ್ನು ಬಿಟ್ಟಂತೆ’ ಎಂದು ಹೇಳುವ ಮೂಲಕ ಸಾಮರಸ್ಯದ ಮೌಲ್ಯವನ್ನು ಈ ವಚನ ಸಾರುತ್ತದೆ.

ಪ್ರಸ್ತುತ ಸಮಾಜದಲ್ಲಿ ದಾಂಪತ್ಯಗಳಲ್ಲಿನ ಬೀರುವ ಅಶಾಂತಿ, ನಂಬಿಕೆ ಇಲ್ಲದ ಸ್ಥಿತಿ, ವೈವಾಹಿಕ ವಿಚ್ಛೇದನೆಗಳೆ ವಿಜೃಂಭಿಸುತ್ತಿರುವ, ಲಾಭಕ್ಕೋಸ್ಕರ ಬದಲಾಗುತ್ತಿರುವ

ಗಂಡ ಹೆಂಡತಿಯರ ಸಂಬಂಧ, ಕಿತ್ತಾಟ, ಒಬ್ಬರಿಗೊಬ್ಬರು ಬೆಲೆ ಕೊಡದ ಸಂಬಂಧಗಳಿಗೆ ಬಸವಣ್ಣ ಕೊಡುವ ಮೌಲ್ಯ ಇದಾಗಿದೆ. ಮಾದಾರ ಚೆನ್ನಯ್ಯನ ಒಂದು ವಚನ ಹೀಗಿದೆ:

**ನಡೆನುಡಿ ಸಿದ್ಧಾಂತವಾದಲ್ಲಿ ಕುಲಹೊಲೆಯಲ್ಲ**
**ನುಡಿ ಲೇಸು ನಡೆಯಧಮವಾದಲ್ಲಿ ಬಿಡುಗಡೆ**
**ಆಚಾರವೆ ಕುಲ, ಅನಾಚಾರವೆ ಹೊಲೆ**
**ಇಂತಿ ಉಭಯವ ತಿಳಿದು ಅರಿಯಬೇಕು.**

"ನಡೆ ನುಡಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂಬ ಉಕ್ತಿಯಂತೆ, ನಡೆಯಂತೆ ನುಡಿ ಇರಬೇಕು, ಜೀವನದಲ್ಲಿ ಹಲವಾರು ತತ್ವಗಳನ್ನು ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕಬೇಕು. ನಡೆನುಡಿಗಳಲ್ಲಿ ಸಮತೆಯನ್ನು ಕಾಯ್ದುಕೊಂಡಿರುವ ಸಮಾಜ ನಿರ್ಮಾಣ ಆಗಬೇಕು. ಪ್ರಸ್ತುತ ಸಮಾಜದಲ್ಲಿ ಅದರ ಕೊರತೆ ಎದ್ದು ಕಾಣುತ್ತಿದೆ. ಆದ್ದರಿಂದಲೇ ಯಾರಿಗೂ ಯಾರ ಮೇಲೂ ನಂಬಿಕೆ ಇರುವುದಿಲ್ಲ. ಅದಕ್ಕೆ ಶರಣರು ಸತ್ಯದ ಮೌಲ್ಯವನ್ನು ತಮ್ಮ ವಚನಗಳಲ್ಲಿ ಸಾರಿದರು. ಮನುಷ್ಯನಿಗೆ ಗಾಳಿ, ನೀರು, ಊಟ ಎಷ್ಟು ಮುಖ್ಯವೋ ಅಷ್ಟೇ ತತ್ವಗಳು, ಆದರ್ಶಗಳು, ಮೌಲ್ಯಗಳು ಮುಖ್ಯವಾಗುತ್ತವೆ. ನುಡಿಯಲ್ಲೂ, ನಡೆಯಲ್ಲೂ ಕೊರತೆಯಾಗಬಾರದಂತೆ ಜೀವನ ಮೌಲ್ಯವನ್ನು ಪ್ರತಿಪಾದಿಸಿದವರು ವಚನಕಾರರು. ಆಚಾರ ವಿಚಾರಗಳು ನಮ್ಮ ವ್ಯಕ್ತಿತ್ವವನ್ನು ನಿರ್ಧರಿಸುತ್ತವೆ. ಆದ್ದರಿಂದಲೇ ಬಸವಣ್ಣ ಹೇಳುತ್ತಾನೆ "ಆಚಾರವೆ ಸ್ವರ್ಗ, ಅನಾಚರವೆ ನರಕ" ಎಂದು. ಇದೇ ಮಾತನ್ನು ಸಮರ್ಥಿಸುತ್ತ ಅಲ್ಲಮಪ್ರಭು ಹೀಗೆ ಹೇಳುತ್ತಾರೆ. "ಆಚಾರವ ಅನಾಚಾರವ ಮಾಡಿ, ಅನಾಚಾರವ ಆಚಾರ ಮಾಡಿ, ಭಕ್ತನ ಭವಿಯ ಮಾಡಿ, ಭವಿಯ ಭಕ್ತನ ಮಾಡಿ, ನುಡಿವವನ ಮಾತು ಕೇಳಲಾಗದು ಗುಹೇಶ್ವರ" ಎನ್ನುತ್ತಾರೆ.

ಕೆಟ್ಟ ಮನಸ್ಸಿನವನಾಗಬಾರದು, ಶುದ್ಧ ಮನಸ್ಸಿನವನಾಗಬೇಕು ಎಂಬ ಜೀವನ ಮೌಲ್ಯವನ್ನು ಸಾರುವ ಜೇಡರ ದಾಸಿಮಯ್ಯನ ಒಂದು ವಚನ ಹೀಗಿದೆ.

**ಹರಿದ ಗೋಣಿಯಲ್ಲೊಬ್ಬ ಕಳವೆಯ ತುಂಬಿದ್ದ**
**ಇರುಳೆಲ್ಲ ನಡೆವನ್ನು ಸುಂಕಂಜಿ**
**ಕಳವೆಯಲ್ಲ ಹೋಗಿ ಬರಿಗೋಣಿಯ ಉಳಿದಿತ್ತು**
**ಅಳಿಮನದವನ ಭಕ್ತಿ ಇಂತಾಯಿತು**
**ರಾಮನಾಥ**

"ಶುದ್ಧ ಮನಸ್ಸಿಲ್ಲದವನ ಭಕ್ತಿ ಹರಿದ ಗೋಣಿಯಲ್ಲಿ ಭತ್ತವನ್ನು ತುಂಬಿದಂತೆ" ಎಂದು ಹೇಳುವುದರ ಮೂಲಕ ಆಡಂಬರದ ಬದುಕನ್ನು ಅಲ್ಲಗಳೆದವರು ವಚನಕಾರರು.

ಅಂದು ಶರಣರು ಹರಿಯಿಸಿದ ವಿಚಾರಧಾರೆ ಅಂದಿನ ಸಮಾಜಕ್ಕೆ ಮಾತ್ರವಲ್ಲದೆ ಎಂದೆಂದಿಗೂ ಎಲ್ಲರಿಗೂ ವ್ಯಾಪಕವಾದ ಶಕ್ತಿಯನ್ನು ಪಡೆಯಿತು. ಮನುಷ್ಯ ಸಮಾಜಜೀವಿ ತನ್ನ ಶಕ್ತಿಗಳ ಪೂರ್ಣವಿಕಾಸಕ್ಕೆ ಜೀವನದ ಕೊನೆಯ ಗುರಿಯನ್ನು ಸಾಧಿಸಿ ಪೂರ್ಣ ಆನಂದವನ್ನು ಪಡೆಯುವುದಕ್ಕೆ ಕೂಡ ಆತ ಸಮಾಜವನ್ನು ಅನೇಕ ರೂಪಗಳಲ್ಲಿ ಅವಲಂಬಿಸಬೇಕಾಗುತ್ತದೆ. ಸಮಾಜದಲ್ಲಿ ಒಬ್ಬೊಬ್ಬ ವ್ಯಕ್ತಿಯ ಉದಯವು ಆಗಬೇಕು ಅವಶ್ಯಕ. ಪ್ರತಿಯೊಬ್ಬ ವ್ಯಕ್ತಿಯು ಸಮಾಜದ ಹಿತವನ್ನು ತನ್ನ ಸಾಧನೆಯ ಮಾರ್ಗಕ್ಕೆ ಬಳಸಿಕೊಂಡು, ವಿಕಾಸವನ್ನು ಸಾಧಿಸಬೇಕು. ಇದೆಲ್ಲ ಆಗಬೇಕಾದರೆ ಜೀವನದಲ್ಲಿ ಮೌಲ್ಯಗಳು ತುಂಬಾ ಮುಖ್ಯ ಎಂದು ವಚನಕಾರರು ಪ್ರತಿಪಾದಿಸಿದರು.

12ನೇ ಶತಮಾನದಲ್ಲಿದ್ದ ಎಲ್ಲ ವಚನಕಾರರು 'ಕಾಯಕ ಜೀವಿಗಳು'. ವೃತ್ತಿಗೆ ಅವರು ಕೊಟ್ಟಷ್ಟು ಮೌಲ್ಯ ಯಾರು ಕೊಟ್ಟಿಲ್ಲ. 'ಕಾಯಕದಲ್ಲಿ ನಿರತನಾಗಿದ್ದರೆ, ಲಿಂಗಪೂಜೆಯನ್ನಾದರು ಮರೆಯಬೇಕು, ಜಂಗಮನ ಹಂಗು ತೊರೆಯಬೇಕು' ಎನ್ನುವ ಧೈರ್ಯ ಯಾರಿಗೂ ಇಲ್ಲ. ಲಿಂಗಭೇದವಿಲ್ಲದೆ, ತರತಮಭಾವವಿಲ್ಲದೆ, ಜಾತಿಗಳಿಲ್ಲದೆ ಎಲ್ಲಾ ಒಂದೆಡೆ ಸೇರಿ ಸರಿತಪ್ಪುಗಳನ್ನು ಚರ್ಚೆ ಮಾಡುತ್ತಿದ್ದ ಕಾಲ ಅದು, ಪರಸ್ತ್ರೀ ಪರಧನವನ್ನು ಕಿಂಚಿತ್ತು ಆಸೆ ಪಡದ, ಅದನ್ನು ಕಾಲಕಸವಾಗಿ ಕಂಡಂತ ಶರಣರು, ಮಾಯಾ ಪ್ರಪಂಚವನ್ನು ಮೀರಿದವರು. 'ಆಸೆಯೆಂಬುದ ಅರಸನಿಗೆ', ಶರಣನಾದವನು ಆಸೆಯನ್ನು ತೊರೆಯಬೇಕು ಎಂದು ತಿಳಿಸಿಕೊಟ್ಟವರು.

ಹೆಣ್ಣನ್ನು ತಿರಸ್ಕಾರದಿಂದ ಕಾಣುತ್ತಿದ್ದ ಸಮಾಜ, ಹೆಣ್ಣನ್ನು ಮಾಯೆ, ಅವಳಿಂದಲೇ ಎಲ್ಲಾ ಸಮಸ್ಯೆಗಳು ಎಂದು ಅಲ್ಲಗಳೆಯುತ್ತಿದ್ದ, ಸ್ತ್ರೀ ಸ್ವಾತಂತ್ರ್ಯವನ್ನು ಕಟ್ಟಿಹಾಕಲಾಗಿದ್ದ ಸಂದರ್ಭದಲ್ಲಿ "ಹೆಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೆ ಮಾಯಾ" ಎಂದವರು ವಚನಕಾರರು. 'ಜನಿತಕ್ಕೆ ತಾಯಾಗಿ ಹೆತ್ತಳು' ಎಂದು ಹೇಳಿದವರು. 'ನಡುವೆ ಸುಳಿವ ಆತ್ಮ ಹೆಣ್ಣು ಅಲ್ಲ ಗಂಡು ಅಲ್ಲ' ಎಂದು ಹೇಳಿ ಸಮಾನತೆಯ ತತ್ವವನ್ನು ಪ್ರತಿಪಾದಿಸಿದವರು. ಅನುಭವ ಮಂಟಪದಲ್ಲಿ ಸ್ತ್ರೀಯರಿಗೂ ಸಮಾನ ಸ್ಥಾನಮಾನಗಳನ್ನು ನೀಡಿ ಗೌರವಿಸುವಂಥಹ ಜೀವನ ಮೌಲ್ಯಗಳನ್ನು ಸಾರಿದವರು ವಚನಕಾರರು.

ಇವನಾರವ ಇವನಾರವ ಎಂದೆನ್ನದೆ, ಇವ ನಮ್ಮವ, ಇವ ನಮ್ಮವ ಎನ್ನುತ್ತಾ, ಎಲ್ಲರನ್ನು ಅಪ್ಪಿಕೊಳ್ಳುವ, ಸ್ವೀಕರಿಸುವ, ಎಲ್ಲರೊಳ ಒಂದಾಗುವ ಮೌಲ್ಯವನ್ನು ಸಾರಿದವರು ವಚನಕಾರರು. ಸಮಾಜದಲ್ಲಿ ಇದ್ದಂಥಹ ವರ್ಣಭೇದ ನೀತಿಯನ್ನು, ಜಾತಿಪದ್ಧತಿಯನ್ನು ಶರಣರು ಅಲ್ಲಗಳೆದರು. ಉತ್ತಮ ಸಮಾಜ ರಚನೆಯ ಕನಸನ್ನು ಕಂಡರು. ಚಾತುರ್ವರ್ಣದ ತತ್ವಗಳೆಲ್ಲ ಶರಣರಲ್ಲಿ ತುಕ್ಕು ಹಿಡಿದಿದ್ದವು. ಬ್ರಾಹ್ಮಣ,

ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳ ಜೊತೆಗೆ 'ಅಸ್ಪೃಶ್ಯ'ರೆಂಬ ಪಂಚಮವರ್ಣವು ಹಿಂದೂ ಧರ್ಮಕ್ಕೆ ಹಿಡಿದಿದ್ದ ಕಳಂಕವಾಗಿತ್ತು. ಧರ್ಮ ಸ್ವಾರ್ಥದ ಮುಖವಾಡವಾಗಿತ್ತು. ಅದನ್ನು ತೀವ್ರವಾಗಿ ಪ್ರತಿಭಟಿಸಿ ತಮ್ಮ ಸಾಧನೆಯ ಶಕ್ತಿಯಿಂದ ಧರ್ಮದ ನಿಜ ಸ್ವರೂಪವನ್ನು ಉಜ್ವಲಗೊಳಿಸಿದವರು ಶರಣರು.

**ಕೊಲುವವನೆ ಮಾದಿಗ, ಹೊಲಸು ತಿಂಬುವವನೆ ಹೊಲೆಯ**
**ಕುಲವೇನೋ ಆವಂದಿರ ಕುಲವೇನೋ**
**ಸಕಲ ಜೀವಾತ್ಮರಿಗೆ ಲೇಸನೆ ಬಯಸುವ**
**ನಮ್ಮ ಕೂಡಲ ಸಂಗನ ಶರಣರೆಲ್ಲ ಕುಲಜರು**

ಎಂದು ಹೇಳುವ ಮೂಲಕ ಜಾತ್ಯಾತೀತತೆಯ ಸಾರ್ವಕಾಲಿಕ ಮೌಲ್ಯವನ್ನು ಸಾರಿದರು.

ಮನುಷ್ಯನ ಯೋಗ್ಯತೆ ನಿರ್ಧರಿಸುವುದು ಅವನ ಹುಟ್ಟಿನಿಂದಲ್ಲ ಅವನ ಆಚಾರ ವಿಚಾರಗಳಿಂದ, ಗುಣಕರ್ಮಗಳಿಂದ ಬಸವಣ್ಣ ಘೋಷಿಸಿದರು. ಇದೇ ಮಾತನ್ನು ಸಿದ್ದರಾಮ "ವೇದವನೋದಿ ವೇದಾಧ್ಯಯನ ಮಾಡಿದರೇನು ಬ್ರಾಹ್ಮಣನಾಗಬಲ್ಲನೆ" ಎಂಬ ವಚನದಲ್ಲಿ ಸ್ಪಷ್ಟಪಡಿಸುತ್ತಾರೆ.

**ಕಾಲುಗಳೆರಡು ಗಾಲಿ ಕಂಡಯ್ಯ**
**ದೇಹವೆಂಬುದು ತುಂಬಿದ ಬಂಡಿ ಕಂಡಯ್ಯ**
**ಬಂಡಿಯ ಹೊಡೆವರೈವರು ಮೊನಿಸರು**
**ಒಬ್ಬರಿಗೊಬ್ಬರು ಸಮವಿಲ್ಲಯ್ಯ**
**ಅದರಿಚ್ಚೆಯನರಿದು ಹೊಡೆಯದಿದ್ದರೆ**
**ಅದರಚ್ಚು ಮುರಿಯಿತು ಗುಹೇಶ್ವರ**

ಎಂದು ಹೇಳುವ ಅಲ್ಲಮ ಪಂಚೇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು, ಬದುಕಿನಲ್ಲಿ ಹೇಗೆ ಸಮತೋಲನವನ್ನು ಕಾಪಾಡಿಕೊಂಡು ಹೋಗಬೇಕು ಎನ್ನುವ ಜೀವನ ಮೌಲ್ಯವನ್ನು ಕಲಿಸುತ್ತಾನೆ.

ಉಪಸಂಹಾರ:

ಹೀಗೆ ವಚನ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು, ಜೀವನ ಮೌಲ್ಯಗಳು, ಆಧ್ಯಾತ್ಮಿಕ ಮೌಲ್ಯಗಳು, ವೈಚಾರಿಕ ಮೌಲ್ಯಗಳು ಕಂಡುಬರುತ್ತವೆ. ಮಾನವನು ತಾನು ಬದುಕಿನುದ್ದಕ್ಕೂ ಆಚರಿಸಬೇಕಾದ ನಡೆನುಡಿಗಳನ್ನು ವಚನ ಸಾಹಿತ್ಯ ಬಿಡಿಬಿಡಿಯಾಗಿ ತಿಳಿಸುತ್ತದೆ.

ಸಮಾನತೆಯನ್ನು ಹಲವು ಆಯಾಮಗಳಲ್ಲಿ ಕಂಡುಕೊಂಡ ವಚನಕಾರರು ಪ್ರಮುಖವಾಗಿ ವರ್ಣ, ವರ್ಗ ಮತ್ತು ಲಿಂಗ ಸಮಾನತೆಯನ್ನು ಜಾರಿಗೊಳಿಸಬೇಕೆಂದು ಪ್ರಯತ್ನಿಸಿದರು. ಸಮಾನತೆಯನ್ನು ಬದುಕಿನ ಒಂದು ಮೌಲ್ಯವೆಂದೆ ಪರಿಗಣಿಸಿದ

ಅವರು ಹಲವು ಶತಮಾನಗಳಿಂದ ತುಳಿತಕ್ಕೊಳಗಾದವರ ನೋವನ್ನು ಅರಿತುಕೊಂಡು ಬಾಳಿದರು.

**ಆನೇಯನೇರಿಕೊಂಡು ಹೋದಿರೆ ನೀವು**
**ಕುದುರೆಯನೇರಿಕೊಂಡು ಹೋದಿರೆ ನೀವು**
**ಕುಂಕುಮ ಕಸ್ತೂರಿ ಪೂಸಿಕೊಂಡು ಹೋದಿರೆ ಅಣ್ಣ**
**ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ**
**ಹೋದಿರಲ್ಲ, ಅಹಂಕಾರವೆಂಬ ಮದಗಜವೇರಿ**
**ವಿಧಿಗೆ ಗುರಿಯಾಗಿ ನೀವು ಹೋದಿರಲ್ಲ**

ಎಂದು ಹೇಳುವ ಮುಖಾಂತರ ಬಸವಣ್ಣ, ಹೃದಯದಲ್ಲಿ ಭಕ್ತಿಭಾವವಿಲ್ಲದೆ, ಸಿರಿಯ ಮದದಲ್ಲಿಯೆ ಕಾಲ ಕಳೆವವರನ್ನು ಈ ರೀತಿ ಟೀಕಿಸಿ ಸತ್ಯದ ದಾರಿಯನ್ನೇ ತೋರುವ ಮಾರ್ಗವನ್ನು ತಿಳಿಸುತ್ತಾನೆ.

ಈ ರೀತಿ ಮಾನವೀಯ ಮೌಲ್ಯಗಳು ವಚನ ಸಾಹಿತ್ಯದ ತುಂಬಾ ಹರಡಿ ಬದುಕಿನ ದಾರಿಗೆ ದಿಪವಾಗಿವೆ. ಅವುಗಳನ್ನು ಅನುಸರಿಸುವುದು ನಮ್ಮ ಧರ್ಮವಾಗಿದೆ.

## ಪರಾಮರ್ಶನ ಗ್ರಂಥಗಳು:

1. ಚಿದಾನಂದ ಮೂರ್ತಿ ಎಂ., (2009), ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ: ವಚನ ಸಾಹಿತ್ಯ, ಸಪ್ನ ಬುಕ್ ಹೌಸ್, ಬೆಂಗಳೂರು.
2. ತಿಪ್ಪೇರುದ್ರಸ್ವಾಮಿ ಎಚ್., (2019), ಶರಣರ ಅನುಭಾವ ಸಾಹಿತ್ಯ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.